# ಕರ್ನಾಟಕ ಪ್ರೌಢಶಿಕ್ಷಣ ಪರೀಕ್ಷಾ ಮಂಡಳಿ

ಮಲ್ಲೇಶ್ವರಂ, ಬೆಂಗಳೂರು–560003.

# KARNATAKA SECONDARY EDUCATION EXAMINATION BOARD

Malleshwaram, Bengaluru – 560003.

## ಮಾದರಿ ಪ್ರಶ್ನೆಪತ್ರಿಕೆ – 2021–22

**ವಿಷಯ : ತೃತೀಯ ಭಾಷೆ ಕನ್ನಡ**
**ಸಮಯ: 3 ಗಂಟೆಗಳು**

**ಸಂಕೇತ ಸಂಖ್ಯೆ: 62K**
**ಗರಿಷ್ಠ ಅಂಕಗಳು : 80**

**ಶಾಲಾ ಅಭ್ಯರ್ಥಿಗಳಿಗಾಗಿ**

---

***ಪರೀಕ್ಷಾರ್ಥಿಗಳಿಗಾಗಿ ಸಾಮಾನ್ಯ ಸೂಚನೆಗಳು :***

1. ಈ ಪ್ರಶ್ನೆಪತ್ರಿಕೆಯು 38 ವಸ್ತುನಿಷ್ಠ ಮತ್ತು ವಿಷಯನಿಷ್ಠ ಮಾದರಿಯ ಪ್ರಶ್ನೆಗಳನ್ನು ಹೊಂದಿದೆ.
2. ಈ ಪ್ರಶ್ನೆಪತ್ರಿಕೆಯನ್ನು ಹಿಮ್ಮುಖ ಜಾಕೆಟ್ ಮೂಲಕ ಮೊಹರು (ಸೀಲ್) ಮಾಡಲಾಗಿದೆ. ಪರೀಕ್ಷೆ ಪ್ರಾರಂಭವಾಗುವ ಸಮಯಕ್ಕೆ ನಿಮ್ಮ ಪ್ರಶ್ನೆಪತ್ರಿಕೆಯ ಬಲಬದಿ ಪಾರ್ಶ್ವವನ್ನು ಕತ್ತರಿಸಿ, ಪತ್ರಿಕೆಯಲ್ಲಿ ಎಲ್ಲಾ ಪುಟಗಳು ಇವೆಯೇ ಎಂದು ಪರೀಕ್ಷಿಸಿಕೊಳ್ಳಿ.
3. ವಸ್ತುನಿಷ್ಠ ಮತ್ತು ವಿಷಯನಿಷ್ಠ ಮಾದರಿಯ ಪ್ರಶ್ನೆಗಳಿಗೆ ಕೊಟ್ಟಿರುವ ಸೂಚನೆಗಳನ್ನು ಪಾಲಿಸಿ.
4. ಬಲ ಭಾಗದಲ್ಲಿ ಕೊಟ್ಟಿರುವ ಅಂಕಿಗಳು ಪ್ರಶ್ನೆಗಳಿಗಿರುವ ಪೂರ್ಣ ಅಂಕಗಳನ್ನು ತೋರಿಸುತ್ತವೆ.
5. ಪ್ರಶ್ನೆಪತ್ರಿಕೆಯನ್ನು ಓದಿಕೊಳ್ಳಲು 15 ನಿಮಿಷಗಳ ಕಾಲಾವಕಾಶವೂ ಸೇರಿದಂತೆ, ಉತ್ತರಿಸಲು ನಿಗದಿಪಡಿಸಲಾದ ಸಮಯವನ್ನು ಪ್ರಶ್ನೆಪತ್ರಿಕೆಯ ಮೇಲ್ಭಾಗದಲ್ಲಿ ನೀಡಲಾಗಿದೆ.

I ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಆಯ್ಕೆಗಳನ್ನು ನೀಡಲಾಗಿದೆ ಅವುಗಳಲ್ಲಿ ಹೆಚ್ಚು ಸೂಕ್ತವಾದ ಉತ್ತರವನ್ನು ಆರಿಸಿ ಕ್ರಮಾಕ್ಷರದೊಂದಿಗೆ ಬರೆಯಿರಿ. 8x1=8

1. ಹಗಲು ಪದದ ವಿರುದ್ಧಾರ್ಥಕ ರೂಪ

ಎ) ಬೆಳಗು ಬಿ) ಅರಳು

ಸಿ) ಇರುಳು ಡಿ) ಮರಳು

2. 'ಗುಂಡಿಲ್ಲದ' ಇದು ಈ ಸಂಧಿಗೆ ಉದಾಹರಣೆಯಾಗಿದೆ

ಎ) ಆದೇಶ ಬಿ) ಲೋಪ

ಸಿ) ಆಗಮ ಡಿ) ವೃದ್ಧಿ

3. ದಿಕ್ಕುಗಳ ಹೆಸರುಗಳನ್ನು ಸೂಚಿಸುವ ಪದಗಳೇ

ಎ) ಸರ್ವನಾಮ ಬಿ) ಭಾವಸೂಚಕ

ಸಿ) ಸಂಖ್ಯಾವಾಚಕ ಡಿ) ದಿಗ್ವಾಚಕ

4. ಇವುಗಳಲ್ಲಿ ತದ್ಭವ ರೂಪ

ಎ) ಕಾವ್ಯ ಬಿ) ವರುಷ

ಸಿ) ಸ್ತ್ರೀ ಡಿ) ಚಂದ್ರ

5. ಅಯ್ಯೋ ದೇವರೇ ನೀನೇ ಗತಿ ಈ ವಾಕ್ಯದಲ್ಲಿ ಬಳಸಬಹುದಾದ ಲೇಖನ ಚಿಹ್ನೆ

ಎ) ಭಾವಸೂಚಕ ಬಿ) ಪ್ರಶ್ನಾರ್ಥಕ

ಸಿ) ಉದ್ಧರಣ ಡಿ) ಆವರಣ

6. 'ಮಗು' ಇದರ ಬಹುವಚನ ರೂಪ

ಎ) ಮಗ ಬಿ) ಮಗಳು

ಸಿ) ಮಗುಗಳು ಡಿ) ಮಕ್ಕಳು

7. 'ಹೆಬ್ಬಾಗಿಲು' ಇದು ಈ ಸಮಾಸಕ್ಕೆ ಉದಾಹರಣೆ

ಎ) ತತ್ಪುರುಷ ಬಿ) ದ್ವಿಗು

ಸಿ) ಕರ್ಮಧಾರಯ ಡಿ) ಕ್ರಿಯಾ

8. ವಿದ್ಯಾರ್ಥಿಗಳು ಶಾಲೆಯಲ್ಲಿ ಕನ್ನಡವನ್ನು ಕಲಿತರು.
ಅಡಿಗೆರೆ ಎಳೆದ ಪದವು ಯಾವ ವಿಭಕ್ತಿಗೆ ಉದಾಹರಣೆಯಾಗಿದೆ.

ಎ) ಪ್ರಥಮಾ ಬಿ) ಸಪ್ತಮೀ
ಸಿ) ದ್ವಿತೀಯಾ ಡಿ) ಪಂಚಮೀ

**II ಕೆಳಗಿನವುಗಳಲ್ಲಿ ಮೊದಲೆರಡು ಪದಗಳಿಗಿರುವ ಸಂಬಂಧದಂತೆ ಮೂರನೆಯ ಪದಕ್ಕೆ ಸರಿ ಹೊಂದುವ ಸಂಬಂಧೀ ಪದವನ್ನು ಬರೆಯಿರಿ.** **4x1=4**

9. ಫಾತಿಮಾಳ ಪತಿ : ಶಿಶುನಾಳ ಶರೀಫ : : ಕೊಡಗಿನ ಗೌರಮ್ಮನವರ ಪತಿ : ____
10. ಡಿ.ಎಸ್.ಪಿ. : ಬ್ರಿಟಿಷ್ ಪೊಲೀಸ್ ಅಧಿಕಾರಿ : : ಸೋಮಣ್ಣ : ____
11. ಸತ್ಯವ ನುಡಿವುದೇ : ದೇವಲೋಕ : : ಮಿಥ್ಯವ ನುಡಿವುದೇ : ____
12. ಬೂಟಕತನದಲಿ : ಬಹಳ ಬಕುತಿ ಮಾಡಿ : : ನಾಟಕ ಸ್ತ್ರೀಯಂತೆ : ____

**III ಕೆಳಗಿನ ಪ್ರತಿಯೊಂದು ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯಿರಿ.** **4x1=4**

13. ಅಮೇರಿಕಾದ ಸಾರ್ವಜನಿಕ ಸ್ಥಳಗಳಲ್ಲಿ ರಾತ್ರಿ ವೇಳೆ ತಂಗುವಂತಿಲ್ಲ ಏಕೆ?
14. ಎಲ್ಲಿ ಹೆಚ್ಚು ಮಳೆ ಸುರಿಯಬೇಕೆಂದು ರೈತನು ಹೇಳುತ್ತಾನೆ?
15. ಮಂತ್ರಿಯಾಗಲು ಯಾವ ಗುಣವಿರಬೇಕು ಎಂದು ಸೋಮೇಶ್ವರ ಶತಕದಲ್ಲಿ ತಿಳಿಸಲಾಗಿದೆ?
16. ಸೋಮೇಶ್ವರ ಶತಕದಲ್ಲಿ ಹೇಳಿರುವಂತೆ ಭಟ ಎನಿಸಿಕೊಳ್ಳಲು ಯಾರು ಅರ್ಹರಲ್ಲ?

**IV ಕೆಳಗಿನ ಪ್ರಶ್ನೆಗಳಿಗೆ ಮೂರು ಅಥವಾ ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯಿರಿ.** **8x2=16**

17. ಗೊರೂರರು ಒಂದು ರಾತ್ರಿಯನ್ನು ಲಾಕಪ್ಪಿನಲ್ಲಿ ಕಳೆಯಲು ಒದಗಿ ಬಂದ ಪ್ರಸಂಗವನ್ನು ವಿವರಿಸಿ.
18. ಶರೀಫರು ತಮಗಾದ ದುಃಖವನ್ನು ಹೇಗೆ ಕಡಿಮೆ ಮಾಡಿಕೊಂಡರು?
19. ರಾಮಸಿಂಗನಿಗೂ ಸಿಪಾಯಿಗಳಿಗೂ ನಡೆದ ಸಂಭಾಷಣೆಯನ್ನು ನಿಮ್ಮ ಮಾತುಗಳಲ್ಲಿ ಸಂಗ್ರಹಿಸಿ.
20. ಕಿತ್ತೂರು ರಾಣಿ ಚೆನ್ನಮ್ಮ ಸೆರೆಯಾಗಲು ಕಾರಣವೇನು?
21. ಬಣ್ಣ ಬೇರೆಯಾದರೂ ಜೀವರಸ ಒಂದೇ ಎಂಬ ಭಾವನೆ 'ಭೂಮಿತಾಯ ಕುಡಿಗಳು' ಕವನದಲ್ಲಿ ವ್ಯಕ್ತವಾದ ಬಗೆಯನ್ನು ವಿವರಿಸಿ.

22. ದೇವಲೋಕ, ಮರ್ತ್ಯಲೋಕವೆಂಬುದು ಬೇರೆಲ್ಲೂ ಇಲ್ಲವೆಂಬುದನ್ನು ಬಸವಣ್ಣನವರು ಹೇಗೆ ನಿರೂಪಿಸಿದ್ದಾರೆ?
23. ಮೋಡಗಳು ಆಕಾಶದಲ್ಲಿ ಕಾಣಿಸಿಕೊಂಡಾಗ ರೈತನಿಗಾಗುವ ಸಂತಸವನ್ನು ನಿಮ್ಮ ಮಾತಿನಲ್ಲಿ ವಿವರಿಸಿ.
24. ಧರ್ಮಪದನಿಗೆ ಬುತ್ತಿ ಕೊಟ್ಟ ಶಿಲ್ಪಿಯ ಮುಖ ಬಿಳಿಚಿಕೊಳ್ಳಲು ಕಾರಣವೇನು?

**V ಕೆಳಗಿನ ವಾಕ್ಯ ಅಥವಾ ಹೇಳಿಕೆಗಳಿಗೆ ಸಂದರ್ಭದೊಡನೆ ಸ್ವಾರಸ್ಯವನ್ನು ಬರೆಯಿರಿ. 2x3=6**

25. 'ದೇವಿ ನನ್ನ ಅಪರಾಧವನ್ನು ಕ್ಷಮಿಸು'
26. 'ಕರ್ನಾಟಕ ವಂಗ ಆಂಧ್ರ ಭಾರತೀಯರೊಂದೆ'

**VI ಕೆಳಗಿನ ಪ್ರಶ್ನೆಗಳಿಗೆ ಐದು ಅಥವಾ ಆರು ವಾಕ್ಯಗಳಲ್ಲಿ ಉತ್ತರ ಬರೆಯಿರಿ. 4x3=12**

27. ಗೊರೂರರು ಮಿನಿ ಪೊಲೀಸ್ ನಗರದಲ್ಲಿ ಕಾರು ಇಳಿದ ಸ್ಥಳದಿಂದ ತಪ್ಪಿಸಿಕೊಳ್ಳಲು ಕಾರಣವೇನು?
28. ರಾಮಸಿಂಗನು ತನ್ನ ಛಲವನ್ನು ಹೇಗೆ ಸಾಧಿಸಿದನು?
29. ಬಸವಣ್ಣನವರ ವಚನಗಳಲ್ಲಿರುವ ಮೌಲ್ಯಗಳನ್ನು ನಿಮ್ಮ ಮಾತಿನಲ್ಲಿ ವರ್ಣಿಸಿ.
30. ಮಳೆರಾಯನನ್ನು ರೈತನು ಪ್ರಾರ್ಥಿಸುವ ಸನ್ನಿವೇಶ 'ಜನಪದ ಗೀತೆ' ಪದ್ಯದಲ್ಲಿ ಬಿಂಬಿತವಾದ ಬಗೆಯನ್ನು ವಿವರಿಸಿ.

**VII ಕೆಳಗಿನ ಕವಿಗಳ/ಸಾಹಿತಿಗಳ ಜನ್ಮಸ್ಥಳ, ಕಾಲ ಮತ್ತು ಕೃತಿಗಳನ್ನು ಕುರಿತು ವಾಕ್ಯ ರೂಪದಲ್ಲಿ ಬರೆಯಿರಿ. 2x3=6**

31. ಮ.ನ. ಮುಕ್ತಾಯಿ
32. ಪುರಂದರದಾಸರು

**VIII ಕೆಳಗೆ ಕೊಟ್ಟಿರುವ ಗಾದೆ ಮಾತುಗಳಲ್ಲಿ ಯಾವುದಾದರೂ ಒಂದನ್ನು ಆರಿಸಿಕೊಂಡು ವಿಸ್ತರಿಸಿ ಬರೆಯಿರಿ. 1x3=3**

33. ಕುಂಬಾರನಿಗೆ ವರುಷ ದೊಣ್ಣೆಗೆ ನಿಮಿಷ

ಅಥವಾ

ಮಾಡಿದ್ದು ಉಣ್ಣೋ ಮಹಾರಾಯ

**IX ಕೆಳಗಿನ ಒಂದು ಪ್ರಶ್ನೆಗೆ ಎಂಟು ಅಥವಾ ಹತ್ತು ವಾಕ್ಯಗಳಲ್ಲಿ ಉತ್ತರ ಬರೆಯಿರಿ.** **1x4=4**

34. ಶರೀಫರ ಬಾಲ್ಯವು ಹಿಂದೂ ಪರಂಪರೆಯೊಂದಿಗೆ ಬೆರೆತುಹೋದ ಪರಿಯನ್ನು ನಿಮ್ಮ ಮಾತುಗಳಲ್ಲಿ ಬರೆಯಿರಿ.

ಅಥವಾ

ಶರೀಫರ ಮತ್ತು ಗುರು ಗೋವಿಂದ ಭಟ್ಟರ ನಡುವಿನ ಅನ್ಯೋನ್ಯತೆಯನ್ನು ಕುರಿತು ಬರೆಯಿರಿ.

**X ಕೆಳಗಿನ ಪದ್ಯ ಭಾಗವನ್ನು ಪೂರ್ಣಗೊಳಿಸಿ ಬರೆಯಿರಿ.** **1x4=4**

35. ಜಾತಿ ಇಲ್ಲದ...........................................

.............................. ನಾವು ನಾಡ ಕಟ್ಟತೇವ

ಅಥವಾ

ಕ್ರಾಂತಿ......................................................

..............................................ಬರೆಯತೇವ

**XI ಕೆಳಗಿನ ಗದ್ಯಭಾಗವನ್ನು ಮನಸ್ಸಿನಲ್ಲಿ ಓದಿಕೊಂಡು ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.** **4x1=4**

36. ಅತ್ತೆ–ಮಾವಂದಿರು ಅನುಮತಿ ಕೊಡಲು ಸಾವಿತ್ರಿಯು ಮೇಲೆ ಸಂತೋಷದಿಂದ ನಗುತ್ತ ಒಳಗೆ ಹೃದಯದಲ್ಲಿ ನೋಯುತ್ತ ಗಂಡನೊಡನೆ ಕಾಡಿಗೆ ಹೊರಟಳು. ಎಲ್ಲೆಲ್ಲಿ ನೋಡಿದರು ಸುತ್ತಮುತ್ತ ಸುಂದರವಾದ ಕಾಡು! ಅದರಲ್ಲಿ ನವಿಲುಗಳ ಕೂಗು; ಪುಣ್ಯ ನದಿಗಳು, ಹೂಬಿಟ್ಟ ಮರಗಳು ನೋಡೆಂದು ಸತ್ಯವಂತನು ಹೇಳುತ್ತ, ತೋರಿಸುತ್ತ ಹೋಗುತ್ತಿದ್ದನು. ಸಾವಿತ್ರಿ ಕಾಲನನ್ನು ಎದುರು ನೋಡುತ್ತಿದ್ದಾಳೆ. ನಾರದಮುನಿ ಹೇಳಿದ ಗಳಿಗೆ ಬಂದ ಕೂಡಲೆ ಇನ್ನೇನು ತನ್ನ ಪತಿಯು ಸತ್ತನೆಂದುಕೊಂಡಳು. ಹೃದಯವು ಎರಡು ಪಾಲಾದಂತಾಯಿತು. ಮತ್ತೊಂದು ಕ್ಷಣದಲ್ಲಿ ಸತ್ಯವಂತನ ಹತ್ತಿರ ಒಬ್ಬ ವ್ಯಕ್ತಿಯು ನಿಂತಿದ್ದು ಕಂಡಿತು. ಅವನು ಆಜಾನುಬಾಹುವಾಗಿ ಸೂರ್ಯನಂತೆ ತೇಜಸ್ವಿಯಾಗಿದ್ದನು. ತಲೆಯಲ್ಲಿ ಕಿರೀಟವು, ಕೈಯಲ್ಲಿ ಪಾಶವೂ ಇತ್ತು. ಮೈ ಕಪ್ಪಾಗಿಯೂ ಕಣ್ಣು ಕೆಂಪಾಗಿಯೂ ನೋಡಿದರೆ ಹೆದರಿಕೆಯಾಗುತ್ತಿತ್ತು. ನಾನು ಯಮ; ನಿನ್ನ ಗಂಡನ ಆಯಸ್ಸು ಮುಗಿಯಿತು; ಆದ್ದರಿಂದ ಅವನನ್ನು ಪಾಶದಿಂದ ಕಟ್ಟಿ ತೆಗೆದುಕೊಂಡು ಹೋಗುತ್ತೇನೆ ಎಂದನು. ಈತನು ಧರ್ಮವಂತ, ರೂಪವಂತ, ಗುಣವಂತ ಆದ್ದರಿಂದ ನನ್ನ ದೂತರು ಕರೆತರುವುದು ತರವಲ್ಲವೆಂದು ನಾನೇ ಬಂದಿದ್ದೇನೆ ಎಂದನು.

ಪ್ರಶ್ನೆಗಳು

ಅ) ಸಾವಿತ್ರಿಯು ಗಂಡನೊಡನೆ ಎಲ್ಲಿಗೆ ಹೊರಟಳು?

ಆ) ಸಾವಿತ್ರಿಯು ಯಾರನ್ನು ಎದುರು ನೋಡುತ್ತಿದ್ದಳು?

ಇ) ಯಮನು ಸಾವಿತ್ರಿಗೆ ಹೇಗೆ ಕಾಣಿಸಿಕೊಂಡನು?

ಈ) ಸತ್ಯವಂತನನ್ನು ಕರೆದುಕೊಂಡು ಹೋಗಲು ಯಮನೇ ಬರಲು ಕಾರಣವೇನು?

**XII ಕೆಳಗಿನ ಯಾವುದಾದರೂ ಒಂದು ವಿಷಯವನ್ನು ಕುರಿತು 15 ವಾಕ್ಯಗಳಿಗೆ ಕಡಿಮೆ ಇಲ್ಲದಂತೆ ಪ್ರಬಂಧ ಬರೆಯಿರಿ. 1x4=4**

37. ರಾಷ್ಟ್ರೀಯ ಹಬ್ಬಗಳ ಮಹತ್ವ

ಅಥವಾ

ಕೋರನಾ ಮುಕ್ತ ಅಭಿಯಾನದಲ್ಲಿ ವಿದ್ಯಾರ್ಥಿಗಳ ಪಾತ್ರ

**XIII ಕೆಳಗಿನ ಯಾವುದಾದರೂ ಒಂದಕ್ಕೆ ಕೊಟ್ಟಿರುವ ಮಾಹಿತಿಯನ್ನು ಆಧರಿಸಿ ಪತ್ರ ಬರೆಯಿರಿ. 1x5=5**

38. ನಿಮ್ಮನ್ನು ಉಡುಪಿ ಸರಕಾರಿ ಶಾಲೆಯ ವಿದ್ಯಾರ್ಥಿನಿ 'ಸುಹಾನಿ' ಎಂದು ಭಾವಿಸಿಕೊಂಡು ನಿಮ್ಮ ಶಾಲೆಯಲ್ಲಿ ಆಚರಿಸಿದ ಮಕ್ಕಳ ದಿನಾಚರಣೆಯ ಸಮಾರಂಭದ ವರದಿಯನ್ನು ಪ್ರಕಟಿಸುವಂತೆ ಉದಯವಾಣಿ ದಿನಪತ್ರಿಕೆಯ ಸಂಪಾದಕರಿಗೆ ಮನವಿ ಪತ್ರ ಬರೆಯಿರಿ

ಅಥವಾ

ನಿಮ್ಮನ್ನು ಬೀದರ್ ಸರ್ಕಾರಿ ಪ್ರೌಢಶಾಲೆಯ ವಿದ್ಯಾರ್ಥಿ ಅನಿರುದ್ಧ ಎಂದು ಭಾವಿಸಿಕೊಂಡು ನಿಮ್ಮ ಹುಟ್ಟುಹಬ್ಬಕ್ಕೆ ಆಹ್ವಾನಿಸಿ ಮಂಗಳೂರಿನಲ್ಲಿರುವ ನಿಮ್ಮ ಚಿಕ್ಕಮ್ಮನವರಿಗೆ ಒಂದು ಪತ್ರ ಬರೆಯಿರಿ.

-●-●-●-